**ಕೇಶವರೆಡ್ಡಿ ಹಂದ್ರಾಳ**

ಕಲೆ: ಆದಿತ್ಯ ಸದಾಶಿವ್

# ಪೆಂಚಾಲಯ್ಯನ ಪೆನ್ಷನ್ ಫೈಲು

ಎಜುಕೇಷನ್ ಇಲಾಖೆಯ ಹೆಡ್ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಸೀನಿಯರ್ ಸೂಪರಿಂಟೆಂಡೆಂಟ್ ಪೆಂಚಾಲಯ್ಯ ತುಂಬಾನೇ ಚಿಂತಾಕ್ರಾಂತನಾಗಿದ್ದ ಇಂದು. ಸರಿಯಾಗಿ ಇನ್ನು ಮೂರು ತಿಂಗಳಿಗೆ ಅಂದರೆ, ಬರುವ ಫೆಬ್ರುವರಿ ತಿಂಗಳಿನಲ್ಲಿ ನಿವೃತ್ತಿಯಾಗುವವನಿದ್ದ. ಕೆಲಸದಿಂದ ನಿವೃತ್ತಿಯಾಗುತ್ತಿರುವುದಕ್ಕೆ ಪೆಂಚಾಲಯ್ಯನಿಗೆ ಖಂಡಿತವಾಗಿಯೂ ಬೇಸರವಿರಲಿಲ್ಲ. ಸರ್ಕಾರಿ ನೌಕರನು ಒಂದಿಲ್ಲೊಂದು ದಿನ ನಿವೃತ್ತಿಯಾಗಲೇಬೇಕೆಂಬ ಸತ್ಯವನ್ನು ಪೆಂಚಾಲಯ್ಯ ಅರಿತವನಾಗಿದ್ದಾನೆ. ಆದರೂ ಅವನ ಬೇಸರಕ್ಕಿರುವ ಕಾರಣಕ್ಕೂ ಅವನ ನಿವೃತ್ತಿಗೂ ಒಂದು ಘನವಾದ ಸಂಬಂಧವೂ ಇದೆ. ಪೆಂಚಾಲಯ್ಯ ಎರಡನೇ ದರ್ಜೆ ಗುಮಾಸ್ತನಾಗಿ ಸ್ಟೈಫಂಡ್ ಆಧಾರದ ಮೇಲೆ ಕೆಲಸಕ್ಕೆ ಸೇರಿದ್ದವನು. ಅನೇಕ ವರ್ಷಗಳ ಅನಂತರ ಪರ್ಮನೆಂಟ್ ಆಗಿದ್ದ. ಹಾಗೆ ನೋಡಿದರೆ ಪೆಂಚಾಲಯ್ಯ ಕನ್ನಡ ಎಂ.ಎ.ಯನ್ನು ಎರಡನೇ ದರ್ಜೆಯಲ್ಲಿ ಪಾಸು ಮಾಡಿದ್ದ. ಪರ್ಸಂಟೇಜ್ ಕಡಿಮೆ ಇದ್ದುದ್ದರಿಂದ ಗೌರ್ನಮೆಂಟ್ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಗಿಟ್ಟಿಸಿಕೊಳ್ಳಲು ತಿಪ್ಪರಲಾಗ ಹಾಕಿದ್ದರೂ ಸಾಧ್ಯವಾಗಿರಲಿಲ್ಲ. ಎರಡು ಲಕ್ಷ ಕೊಟ್ಟರೆ ಇಂಟವ್ರ್ಯೂನಲ್ಲಿ ಮಾರ್ಕ್ಸ್ ಜಾಸ್ತಿ ಹಾಕಿಸ್ತೀನಿ ಎಂದು ಆ ಟೈಮಿನಲ್ಲಿ ಯಾರೋ ಹೇಳಿದ್ದರು. ಆದರೆ, ಎರಡು ಸಾವಿರವೂ ಜೇಬಿನಲ್ಲಿ ಇಲ್ಲದ ಪೆಂಚಾಲಯ್ಯ ಕೇಳಿದವರ ಎದುರು ಥಟ್ಟನೆ ಮೂಕನಾಗಿದ್ದ. ಹೇಗೂ ಸ್ಟೈಫಂಡರಿ ಗ್ರಾಜುಯೆಟ್ ಆಗಿ ಎಜುಕೇಷನ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ತಿಂಗಳಿಗೆ ಐದುನೂರು ರೂಪಾಯಿ ಸ್ಟೈಫಂಡ್ ಬಂದು ಖರ್ಚು ಪರ್ಚು ಸಲೀಸಾಗಿ ಓಡಿ ಹೋಗುತ್ತಿತ್ತು. ಆಫೀಸ್ ಕೆಲಸ ಮಾಡುತ್ತಿದ್ದದ್ದು ಅಷ್ಟರಲ್ಲೇ ಇತ್ತು. ವಾರದಲ್ಲಿ ಎರಡು ಮೂರು ದಿನ ಹೋಗಿ ಅಟೆಂಡೆನ್ಸ್ ಹಾಕಿ ಬರುತ್ತಿದ್ದ. ಸಂಬಂಧಪಟ್ಟ ಸೆಕ್ಷನ್ ಹೆಡ್ ಒಳ್ಳೆಯವನಾಗಿದ್ದು, ‘‘ವಾರಕ್ಕೆರಡು ಸಲ ಬಂದು ಸೈನ್ ಹಾಕಿ ಹೋಗಿ ಸಾರ್, ಡೈಲಿ ಬಂದ್ರೆ ಸರ್ಕಾರ ಕೊಡೊ ಐನೂರು ರೂಪಾಯಿ ಬಸ್‌ಚಾರ್ಜ್, ಕಾಫಿಗೂ ಸಾಕಾಗಲ್ಲ. ಎಂ.ಎ. ಓದಿರೋ ನಿಮ್ಮನ್ನು ಈ ರೀತಿ ನೋಡೋದಕ್ಕೆ ಹೊಟ್ಟೆ ಉರಿತ್ತೈತೆ.’’ ಎಂದು ಕಾಫಿ ಕುಡಿಯುತ್ತಾ ಹೇಳಿದ್ದ. ಏಕೆಂದರೆ, ಪೆಂಚಾಲಯ್ಯ ಎಂ.ಎ. ಓದಿದ್ದರೆ, ಸೆಕ್ಷನ್ ಹೆಡ್ ಎಸ್ಸೆಸ್ಸೆಲ್ಸಿ ಮಾತ್ರ ಓದಿ ಪ್ರೊಮೋಶನ್ ಮೇಲೆ ಆ ಜಾಗದಲ್ಲಿ ಕುಂತಿದ್ದ. ಯಂಗಾದ್ರಾಗ್ಲಿ ಅಂತ ಪೆಂಚಾಲಯ್ಯ